ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಹುದ್ದೆಗಳನ್ನು ಭರ್ತಿ ಮಾಡತಕ್ಕಂತಹ ವಿಚಾರದಲ್ಲಿ ಮಾನ್ಯ ಖರ್ಗೆಯವರು ಹೇಳಿರುವ ವಿಚಾರವನ್ನು ನಾನು ಒಪ್ಪಿ, ಈ ಸರ್ಕಾರದಿಂದ ಏನು ನಿಯಮಗಳನ್ನು ಕಳುಹಿಸಿದ್ದಾರೆ ಎಂದು ಹೇಳಿದರೆ, ದಿನಗೂಲಿ ನೌಕರರನ್ನು ನೇಮಕ ಮಾಡಿಕೊಳ್ಳುವುದಕ್ಕೆ, ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ನೇಮಕ ಮಾಡುವುದಾಗಲೀ, ಯಾವುದೇ ರೂಪದ ನೇಮಕ ಮಾಡಬೇಕಾದರೂ ಅದರಲ್ಲಿ ರಿಸರ್ವೇಷನ್‌ನ್ನು ಪಾಲಿಸುವ ನಿಯಮ ಇದೆ. ಕೆಲವು ಸ್ಥಳೀಯ ಅಧಿಕಾರಿಗಳು ಅವರಿಗೆ ಬೇಕಾದಾಗ ಮಾಡಿಕೊಂಡು ಸುಮಾರು 60 ಸಾವಿರ ಹುದ್ದೆಗಳು ಭರ್ತಿ ಮಾಡಿದ್ದಾರೆ. ಆದ್ದರಿಂದ ನಾನು ರೋಸ್ಟರ್ ಫಾಲೋ ಮಾಡದೆ ಇರುವುದರಿಂದ ಅದನ್ನು ಪ್ರತ್ಯೇಕವಾಗಿ ಸ್ಪೆಶಿಯಲ್ ರೆಕ್ರೂಟ್ ಮೆಂಟ್ ಮಾಡತಕ್ಕಂಥಾದ್ದನ್ನು ನಾನು ಹೇಳುತ್ತೇನೆ. ಇನ್ನು ಒಂದು ಮುಖ್ಯವಾದ ವಿಚಾರ ಸುಪ್ರೀಂ ಕೋರ್ಟ್ ನವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಭಡ್ತಿ ಕೊಡುವಾಗ ರೋಸ್ಟರನ್ನು ಫಾಲೋ ಮಾಡಬೇಕೆಂದು ಹೇಳಿ ಅದನ್ನು 1997ರವರೆಗೆ....

ಅಧ್ಯಕ್ಷರು : ಬೇರೆ ಪ್ರಶ್ನೆ, ಬಡ್ತಿಗೆ ಇದು ಸಂಬಂಧಪಡುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಬಡ್ತಿ ನೀಡಬೇಕೆಂದು ಇದೆ ಅದನ್ನು ಸರ್ಕಾರ 94ರವರೆಗೆ ಮುಂದುವರೆಸಿತ್ತು 94ರಿಂದ ಇನ್ನು ಮೂರು ವರ್ಷ ಮುಂದುವರೆಸಬೇಕಾಗಿತ್ತು. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಮೂರು ತಿಂಗಳಾದರೂ ಆದೇಶ ಹೊರಡಿಸಿಲ್ಲ. ಅದನ್ನು ಹೊರಡಿಸುತ್ತೀರೋ ಎಂದು ನಾನು ಕೇಳುತ್ತೇನೆ.

ಅಧ್ಯಕ್ಷರು : ಪ್ರತ್ಯೇಕವಾಗಿ ಕೇಳಿ, ಬಡ್ತಿ ಬೇರೆ, ನೇಮಕಾತಿ ಬೇರೆ.

ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ

166 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರಪಾಲಿಕೆಯ ಅವಧಿಯು ಯಾವಾಗ ಪೂರ್ಣಗೊಳ್ಳುತ್ತದೆ?

ಆ) ಬೆಂಗಳೂರು ಮಹಾನಗರಪಾಲಿಕೆಗೆ ಯಾವಾಗ ಚುನಾವಣೆ ನಡೆಸಲಾಗುವುದು?

ಇ) ಕಳೆದ ನಾಲ್ಕು ವರ್ಷಗಳಿಂದ ಬೆಂಗಳೂರು ಮಹಾನಗರಪಾಲಿಕೆಯು ವಶಪಡಿಸಿಕೊಂಡಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೊಸ ಬಡಾವಣೆಗಳೆಷ್ಟು?

ಈ) ಈ ಬಡಾವಣೆಗಳಲ್ಲಿರತಕ್ಕ ನಾಗರೀಕರೂ ಮುಂಬರುವ ಮಹಾನಗರಪಾಲಿಕೆಯಲ್ಲಿ ಮತ ನೀಡುವ ಅವಕಾಶವನ್ನು ಕಲ್ಪಿಸಲಾಗುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಸ್ವಾಮಿ, 2-5-1995 ರಂದು. (ಎಂಡನೇ ಮೇ ಹತ್ತೊಂಭತ್ತ ನೂರ ತೊಂಭತ್ತೈದನೇ ಇಸವಿ)

ಆ) ಸಂವಿಧಾನ (74ನೇ ತಿದ್ದುಪಡಿ) ಕಾಯ್ದೆ 1992ರ ಅನುಗುಣವಾಗಿ ರಾಜ್ಯದ ಮುನಿಸಿಪಲ್ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ ಮತ್ತು ಈ ತಿದ್ದುಪಡಿ ಕಾಯ್ದೆಯನ್ವಯ ಶಾಸನಬದ್ಧ ಅಗತ್ಯತೆಗಳನ್ನು ಪೂರೈಸಿದ ನಂತರ ಬೆಂಗಳೂರು ಮಹಾನಗರಪಾಲಿಕೆ ಒಳಗೊಂಡಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಲಾಗುವುದು.

ಇ) 90 (ತೊಂಭತ್ತು)

ಈ) ಹೌದು

ಶ್ರೀ ರಾಮಲಿಂಗಾರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೇ, ಒಂದು, ಮತ್ತು ಮೂರು, 4ನೇ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಟ್ಟಿದ್ದೀರಿ, ಆದರೆ ಚುನಾವಣೆ ಯಾವಾಗ ಮಾಡುತ್ತೀರಿ ಎಂಬ ಪ್ರಶ್ನೆ ಬಗ್ಗೆ ಸರಿಯಾದ ಉತ್ತರ ಇಲ್ಲ. ಅದು ತಿಂಗಳಿಗೆ ಮಾಡುತ್ತೀರೋ? ವರ್ಷಕ್ಕೆ ಮಾಡುತ್ತೀರೋ? ಅಥವಾ ಎರಡು ವರ್ಷಗಳಿಗೆ ಮಾಡುತ್ತೀರೋ? ಶಾಸನಬದ್ಧ ವ್ಯವಸ್ಥೆಯಾದ ಮೇಲೆ ಮಾಡುತ್ತೇವೆಂದು ಹೇಳಿದ್ದಾರೆ. ಸ್ಪೆಸಿಫಿಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಡಬೇಕು. ಮತ್ತೆ ಡಿ-ನೋಟಿಫಿಕೇಷನ್ ಮಾಡುವಾಗ ಏನಾಗಿದೆ, ಬೆಂಗಳೂರು ನಗರದಲ್ಲಿ ಕೆಲವು ಕ್ಷೇತ್ರಗಳಲ್ಲಿ ಬರೀ 10 ಸಾವಿರ ಮತದಾರರು ಇದ್ದಾರೆ, ಇನ್ನು ಕೆಲವು ಕ್ಷೇತ್ರಗಳಲ್ಲಿ ಒಂದರಿಂದ ಒಂದೂವರೆ ಲಕ್ಷ ಮತದಾರರು ಇದ್ದಾರೆ. ಅದನ್ನು ಸ್ಟೆಂಟಿಫಿಕ್ಕಾಗಿ ಲಿಮಿಟೇಷನ್ ಮಾಡಬೇಕು. ಸಮಾನತೆ ಎಲ್ಲಾ ಡಿವಿಷನ್‌ನಲ್ಲಿ ಇರಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಕೇಳಿರುವ ಸ್ಪಷ್ಟೀಕರಣಕ್ಕೆ ನಾನು ಡಿ-ಲಿಮಿಟೇಷನ್ of wards ಮಾಡಲೇಬೇಕಾಗುತ್ತದೆ. ಏಕೆಂದರೆ 74ನೇ ತಿದ್ದುಪಡಿ ಬಂದ ಮೇಲೆ ಚುನಾವಣೆಯನ್ನು ಮುಂದೂಡಲಿಕ್ಕೆ ಅನಿರ್ದಿಷ್ಟ ಕಾಲ ಸಾಧ್ಯವಿಲ್ಲ. ಚುನಾವಣೆ ಮಾಡಲೇಬೇಕಾಗುತ್ತದೆ. ಆದರೆ ಕೆಲವು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಡಿ-ಲಿಮಿಟೇಷನ್ ಆಫ್ wards ಮಾಡುವಂತಹ ಪ್ರಶ್ನೆ ಇಲ್ಲಿ ಎತ್ತಿದಿರಿ ನೋಟಿಫೈಡ್ ಏರಿಯಾ 90 ಭಾಗಗಳು ಏನಿವೆ ಇವುಗಳನ್ನು ಸೇರಿಸಬೇಕು ಎನ್ನತಕ್ಕಂಥಾದ್ದು ಸರ್ಕಾರದ ಮುಂದೆ ಇದೆ, ಅದನ್ನು ಸೇರಿಸಲಿಕ್ಕೆ ನಾವು ಒಪ್ಪಿಗೆ ಕೊಟ್ಟಿದೇವೆ. ಇದಾದ ಮೇಲೆ ಡಿ ಲಿಮಿಟೇಷನ್ ಮಾಡಬೇಕಾಗುತ್ತದೆ. ಡಿ ಲಿಮಿಟೇಷನ್ ಮಾಡತಕ್ಕಂತಹ ಕಾಲದಲ್ಲಿ ಅದಕ್ಕೆ ಸಫಿಷಿಯಂಟ್ ಟೈಮ್ ಬೇಕಾಗುತ್ತದೆ. ಅಪ್ಲಿಕೇಷನ್ಸ್ ಕಾಲ್ಡರ್ ಮಾಡಬೇಕಾಗುತ್ತದೆ. ಅದೆಲ್ಲಾ ತಮಗೆ ಗೊತ್ತಿದೆ. ಕಾನೂನು ಚೌಕಟ್ಟಿನೊಳಗೆ ಕೆಲವು ನಿಯಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದಾದ ಮೇಲೆ ರಿಸರ್ವೇಷನ್ ಮಹಿಳೆಯರಿಗೆ, ಬ್ಯಾಕ್ ವರ್ಡ್ ನವರಿಗೆ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಮಾಡಬೇಕಾಗುತ್ತದೆ. ಇವೆಲ್ಲಕ್ಕೆ ಸಫಿಷಿಯಂಟಾಗಿ 4-5 ತಿಂಗಳು ಕಾಲ ಬೇಕಾಗುತ್ತದೆ. ಅಂದರೆ ಸರ್ಕಾರಕ್ಕೆ ಅಷ್ಟೇ ಆಸಕ್ತಿ ಇದೆ. ಈ ವರ್ಷದ ಅಂತ್ಯದ ಒಳಗೆ ಚುನಾವಣೆ ಮುಗಿಸಬೇಕು ಎನ್ನತಕ್ಕಂಥಾದ್ದು ಸರ್ಕಾರದ ಆಶ್ವಾಸನೆ.

ಶ್ರೀ ರಾಮಲಿಂಗಾರೆಡ್ಡಿ : ಮತದಾರರು ಎಲ್ಲಾ ವರ್ಗಗಳಲ್ಲಿ ಸಮವಾಗಿ ಇರಬೇಕು ಎಂದು ನಾನು ಹೇಳಿದ್ದುದು.

ಅಧ್ಯಕ್ಷರು : ಮತದಾರರು ಒಂದು ಕ್ಷೇತ್ರದಲ್ಲಿ ಕಡಿಮೆ ಇರುತ್ತಾರೆ. ಮತ್ತೊಂದು ಕ್ಷೇತ್ರದಲ್ಲಿ ಬಹಳ ಹೆಚ್ಚು ಇರುತ್ತಾರೆ. ಶಾಸ್ತ್ರೀಯವಾಗಿ ಎಲ್ಲಾ ಮತ ಕ್ಷೇತ್ರದಲ್ಲಿ ಬಹಳ ಹೆಚ್ಚು ಇರುತ್ತಾರೆ. ಶಾಸ್ತ್ರೀಯವಾಗಿ ಎಲ್ಲಾ ಮತ ಕ್ಷೇತ್ರಗಳಲ್ಲೂ ಸಮನಾಗಿ ಮತದಾರರನ್ನು ಹಂಚಿಕೆ ಮಾಡುವುದರಲ್ಲಿ ಡಿ ಲಿಮಿಟೇಷನ್ ಆಗಬೇಕು ಎನ್ನುವುದು ಅವರ ಅಭಿಪ್ರಾಯ.

ಶ್ರೀ ಹೆಚ್.ಡಿ. ದೇವೇಗೌಡ : ಇದನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಬಹಳ ಕರಾರುವಕ್ಕಾಗಿ ಮಾಡುವುದು ಕಷ್ಟವಾಗುತ್ತದೆ. ಕೆಲವು ಕಡೆ ಏಳು ಲಕ್ಷ ಮತದಾರರು ಮತ್ತೆ ಕೆಲವು ಕಡೆ 90 ಸಾವಿರ ಮತದಾರರು ಇದ್ದಾರೆ. ಈ ಮನೆಯಲ್ಲಿ ನಾವು ಬರತಕ್ಕಂತಹ ವಿಧಾನಸಬಾ ಕ್ಷೇತ್ರದಲ್ಲಿ ಇರತಕ್ಕಂತಹ ಮತದಾರರ ಸಂಖ್ಯೆ ನೋಡಿದರೆ ಗೊತ್ತಾಗುತ್ತದೆ. ಹಾಗೆ ನಾವು ಬ್ರೆಡ್ ಸ್ಲೈಸ್‌ನ್ನು ಕಟ್ ಮಾಡುವ ಹಾಗೆ ಮಾಡುವುದಕ್ಕೆ ಕಷ್ಟವಾಗುತ್ತದೆ. Various factors have to be taken into consideration.

ಸಾಧ್ಯವಾದ ಮಟ್ಟಿಗೆ ನೀವು ಹೇಳಿದ ಸಲಹೆಯನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ.

11.40 ಎಂ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಕಳೆದ ಹನ್ನೆರಡು ವರ್ಷಗಳಿಂದ ಚುನಾವಣೆಯಲ್ಲಿ ಓಟು ಹಾಕುತ್ತಾರೆ, ಅದಕ್ಕೆ ಈಗ ಹೊಸ ಬಡಾವಣೆಗಳನ್ನು ಸಹ ಸೇರಿಸಿಕೊಳ್ಳುತ್ತೀರಿ. ಆದರೆ ಓಟು ಹಾಕುವ ಜನಕ್ಕೆಲ್ಲಾ ನಗರಪಾಲಿಕೆಯಿಂದ ನಾವು ಸೌಲಭ್ಯ ಕೊಡುವುದಿಲ್ಲ. ಓಟಿಗೆ ಮಾತ್ರ ನಗರ ಪಾಲಿಕೆಗೆ ಅವರು ಮತದಾರರು. ಆದರೆ ಸೌಲಭ್ಯದಿಂದ ಅನೇಕರು ವಂಚಿತರಾಗುತ್ತಾರೆ. ಈ ಚುನಾವಣೆಯಲ್ಲಿಯಾದರೂ ಕೂಡ ಯಾರಿಗೆ ಸೌಲಭ್ಯ ಕೊಡುತ್ತೀರಿ ಅವರನ್ನು ಮಾತ್ರ ಮತದಾರರನ್ನಾಗಿ ಮಾಡುತ್ತೀರೋ?

ಶ್ರೀ ಹೆಚ್.ಡಿ. ದೇವೇಗೌಡ : ನೀವು ಬಹಳ ಉಪಯುಕ್ತವಾದ ಸಲಹೆಯನ್ನು ಕೊಟ್ಟಿದ್ದೀರಿ ಓಟನ್ನು ಹಾಕಿಸಿಕೊಂಡ ಮೇಲೆ ಅವರಿಗೆ ಸೌಲಭ್ಯ ಕೊಡಬೇಕಾದದ್ದು ಜವಾಬ್ದಾರಿ. ಅದನ್ನು ಕಾರ್ಪೊರೇಷನ್ ನಿರ್ವಹಣೆ ಮಾಡುತ್ತದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ : 13(259) : 10(238)

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ನಾಲ್ಕು ಪ್ರಶ್ನೆ ಒಂದೇ ತರಹ ಇದೆ. Replies are same and identical.

ಮಾನ್ಯ ಗುರುಪಾದಪ್ಪನವರ ಪ್ರಶ್ನೆ ಮತ್ತು ಹಿರಿಯ ಸದಸ್ಯರಾದ ಮಾನ್ಯ ನಂಜೇಗೌಡರು ಇವರಿಬ್ಬರದು ಸೇಮ್ ಐಡೆಂಟಿಕಲ್ ರಿಪ್ಲೈಸ್ ಬರುತ್ತದೆ. ಆದ್ದರಿಂದ ಅದನ್ನೆಲ್ಲಾ ಒಟ್ಟಿಗೆ ತೆಗೆದುಕೊಳ್ಳೋಣ ಎಂದು ಹೇಳಿದರೆ ತೆಗೆದುಕೊಳ್ಳೋಣ. ಇಲ್ಲ ಎಂದರೆ ನೀವು ಹೇಗೆ ಹೇಳುತ್ತೀರಿ ಹಾಗೆ ಇದಕ್ಕೆ ನಾನು ಉತ್ತರ ಹೇಳುತ್ತೇನೆ.

ಅಧ್ಯಕ್ಷರು : ಹೇಗೆ ಮಾಡೋಮ ನಂಜೇಗೌಡರೇ?

ಶ್ರೀ ಹೆಚ್.ಎನ್. ನಂಜೇಗೌಡ : ಆಯಿತು ಒಟ್ಟಿಗೆ ತೆಗೆದುಕೊಳ್ಳೋಣ. ನನ್ನ ಪ್ರಶ್ನೆ 238ಕ್ಕೆ ಸೇರಿಸಿಕೊಂಡು ಒಟ್ಟಿಗೆ ಉತ್ತರ ಕೊಟ್ಟುಬಿಡಿ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಹಾಕಿದಂತಹ ಪ್ರಶ್ನೆ ಏನಿದೆ ಅದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಉತ್ತರ ಏನಿದೆ ಅದನ್ನು ಓದಿಬಿಡುತ್ತೇನೆ.

ಬಚಾವತ್ ವರದಿ ಪ್ರಕಾರ ನೀರಿನ ಬಳಕೆ

259-ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಚಾವತ್ ವರದಿಯ ಪ್ರಕಾರ 2000ನೇ ಇಸವಿಯೊಳಗೆ ರಾಜ್ಯದ ಪಾಲಿಗೆ ಬರುವ ನೀರಿನ ಸಂಪೂರ್ಣ ಬಳಕೆ ಮಾಡುವ ವಿಶ್ವಾಸ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಇ) ಈ ಸಂಬಂಧವಾಗಿ ನಡೆಯಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಂದಾಜು ಎಷ್ಟು ಹಣ ಖರ್ಚಾಗಲಿದೆ?

ಈ) ಈ ಹಣದ ಸಂಗ್ರಹಣೆಗಾಗಿ ಯಾವ ಯಾವ ಕ್ರಮಗಳನ್ನು ರೂಪಿಸಲಾಗುತ್ತಿದೆ?

ಉ) ನೀರಾವರಿ ಬಾಂಡ್‌ಗಳ ಮೂಲಕ ಹಣವನ್ನು ಸಂಗ್ರಹಿಸಲಾಗುವುದೇ?

ಊ) ಈ ವಿಷಯದ ಬಗ್ಗೆ ಚರ್ಚಿಸಲು ಪ್ರಸಕ್ತ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಎಷ್ಟು ಸಭೆಗಳನ್ನು ಕರೆಯಲಾಗಿದೆ?